

# ದುಗುಡದ ಮೋಡಗಳು

**ಸಂಕೇತಗಳ ಸಮರ್ಥ ಬಳಕೆಯಿಂದ ಸಾಧಾರಣ ಕಥನವನ್ನೂ ತೀವ್ರ ಪರಿಣಾಮ ಬೀರುವ ಹಾಗೆ ಬೆಳೆಸುವ ಪ್ರಯತ್ನ 'ಕ್ಲೌಡ್ಸ್' ಕಿರುಚಿತ್ರದಲ್ಲಿದೆ.**

■ ಗೌರಿ

ಸಬ್‌ಟೆಕ್ಸ್ಟ್ ಮತ್ತು ಸಂಕೇತಗಳಿಗೆ ದೃಶ್ಯಮಾಧ್ಯಮದಲ್ಲಿ ವಿಶೇಷ ಸ್ಥಾನವಿದೆ. ಹೇಳದೆಯೇ ಕಾಣಿಸುವ, ರಿಂಗಣಿಸುವ ಶಕ್ತಿ ಈ ಸಬ್‌ಟೆಕ್ಸ್ಟ್‌ಗಳಿಗಿರುತ್ತದೆ. ಕೆಲವೊಮ್ಮೆ ಪ್ರಯೋಗದ ಹೆಸರಿನಲ್ಲಿ ಕಥನಕ್ಕಿಂತಲೂ ಈ ಸಬ್‌ಟೆಕ್ಸ್ಟುಗಳೇ ಮುನ್ನೆಲೆಗೆ ಬಂದು, ಆ ಕಲಾಕೃತಿ ಅನುಭವವಾಗಿ ದಕ್ಕುವುದರ ಬದಲಿಗೆ ಸಂಕೇತಗಳ ಫಜಲ್‌ಗಳಾಗಿಬಿಡುವುದೂ ಇದೆ. ಕುರ್ಚಿಯ ಆಯಕಟ್ಟಿನ ಜಾಗದಲ್ಲಿ ಹೊಳೆಯುವ ಮೊಳೆಯನ್ನು ಕೂಡುವ ಜಾಗದಲ್ಲಿ ಅರ್ಧಮರ್ಧ ಹೊಡೆದುಬಿಟ್ಟರೆ ಚುಚ್ಚದೇ ಇರುತ್ತದೆಯೇ?

ಕಥನ ಮತ್ತು ಸಂಕೇತಗಳ ಹದವಾದ ಮಿಶ್ರಣದಿಂದಲೇ ಒಳ್ಳೆಯ ಕಲಾಕೃತಿ ರೂಪುಗೊಳ್ಳಲು ಸಾಧ್ಯ. ಅಲ್ಲಿ ಸಂಕೇತಗಳ ಭಾರ ಹೊರಲಾಗದೆ ಕಥನ ಕುಸಿಯುವುದಿಲ್ಲ. ಸಂಕೇತಗಳನ್ನು ಪೂರ್ತಿ ಕಡೆಗಣಿಸಿ ಎಲ್ಲವನ್ನೂ ಹೇಳಿಬಿಡುವ ಹಪಹಪಿಯಲ್ಲಿ ವಾಚ್ಯವೂ ಆಗುವುದಿಲ್ಲ.

ಕಥನದ ಭಾವತೀವ್ರತೆಯನ್ನು, ಸಂಕೇತಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದಕ್ಕೆ ಉದಾಹರಣೆಯಾಗಿ 'ಕ್ಲೌಡ್ಸ್' ಕಿರುಚಿತ್ರವನ್ನು ನೋಡಬಹುದು. 4.30 ನಿಮಿಷಗಳ ಈ ಕಿರುಚಿತ್ರ ನಮ್ಮೊಳಗೆ ದೊಡ್ಡ ಕಥನಕ್ಯಾನ್ವಾಸನ್ನೇ ಸೃಷ್ಟಿಸುತ್ತದೆ. ಕಿಂಚಿತ್ ಹೇಳಿ ಬೃಹತ್ ಭಾವಸಂಕಿರಣವನ್ನು ಮನಸಲ್ಲಿ ಕಟ್ಟುವ ಕಿರುಚಿತ್ರ ಇದು.

ಒಬ್ಬ ಪುಟಾಣಿ ಹುಡುಗನ ದಿನಚರಿಯ ಚಿತ್ರಣ ಇಲ್ಲಿದೆ. ಬೆಳಿಗ್ಗೆ ಸ್ಯಾಂಡ್‌ವಿಚ್ ಕತ್ತರಿಸಿಕೊಂಡು ಡಬ್ಬದಲ್ಲಿ ತುಂಬಿಕೊಂಡು, ನಾಯಿಗೆ ಆಹಾರ ಹಾಕಿ ಶಾಲೆಗೆ ಹೋಗುತ್ತಾನೆ. ಅಲ್ಲಿ ಪಕ್ಕದ ಸಾಲಿನಲ್ಲಿ ಕೂತ ಹುಡುಗಿ ಅವನ ನೋಡಿ ಮುಗುಳ್ನಗುತ್ತಾಳೆ. ಇವನೂ ಪ್ರತಿಯಾಗಿ ಮುಗುಳ್ನಗುತ್ತಾನೆ.



**ಹೆಸರು:** ಕ್ಲೌಡ್ಸ್
**ನಿರ್ದೇಶನ:** ಡೇವಿಡ್ ಯೋರ್ಕೆ
**ನಿರ್ಮಾಣ:** ಫಿಲ್ ಬೀಸ್ಟಾಲ್
**ತಾರಾಗಣ:** ಎಥನ್ ಹೈಲಿ, ಕ್ಲೋಯ್ ಕೇಲ್ಸೇಲ್, ಸೂಸಾನ್ ಹಸ್ಬಂಡ್
**ಧ್ವನಿ ವಿನ್ಯಾಸ/ಸಂಗೀತ:** ಅಲೆಕ್ಸ್ ಎಲೆಕ್ರಿಂಟನ್

ಮಧ್ಯಾಹ್ನ ಊಟದ ಸಮಯದಲ್ಲಿ ಒಬ್ಬಂಟಿಯಾಗಿ ಕೂತ ಅವನ ಪಕ್ಕ ಅವಳು ಬಂದು ಕೂಡುತ್ತಾಳೆ. ತನ್ನ ಡಬ್ಬದಲ್ಲಿದ್ದ ಸೇಬನ್ನು ಅವನ ಕೈಗೆ ಕೊಟ್ಟು ನಗುತ್ತಾಳೆ. ಸಂಜೆ ಅವನು ಮನೆಗೆ ಬರುತ್ತಾನೆ. ಮನೆಯಲ್ಲಿ ಕಾಯಿಲೆ ಬಿದ್ದ ಅಮ್ಮನ ಪಕ್ಕ ಹೋಗಿ ಕೂಡುತ್ತಾನೆ.

ಇಷ್ಟೇ ಈ ಕಿರುಚಿತ್ರದ ಕತೆ. ಆದರೆ ಇಷ್ಟನ್ನು ಹೇಳಿದರೆ ಏನನ್ನೂ ಹೇಳಿದಂತಾಗುವುದಿಲ್ಲ. ಇಲ್ಲಿ ಆರೆಂಟು ವರುಷದ ಪುಟಾಣಿ ಹುಡುಗನ ದಾರುಣ ಜಗತ್ತಿದೆ. ಆ ಜಗತ್ತು ಹೊರಪ್ರಪಂಚದ ಜನರಿಗೆ ಕಾಣಿಸುವಂಥದ್ದಲ್ಲ. ಅವನೊಟ್ಟಿಗೇ ಅದೃಶ್ಯವಾಗಿದ್ದು, ಎಲ್ಲರಿಂದಲೂ ಅವನನ್ನು ಬೇರ್ಪಡಿಸುವ ಬೇಲಿ ಅದು. ಮುಖದಲ್ಲಿನ ನಗುವನ್ನೇ ಕಸಿದು ದುಗುಡವನ್ನು ತುಂಬುವ ನೋವು ಮಡುಗಟ್ಟಿದ ಜಗತ್ತದು. ಅದನ್ನು ಹೇಗೆ ಚಿತ್ರಿಸುವುದು? ಒಂದೋ ನಮ್ಮ ದೈನಿಕ ಧಾರಾವಾಹಿ ಮತ್ತು ಹಲವು ಸಿನಿಮಾಗಳಲ್ಲಿಯಂತೆ ಗೋಳಾಡಿಸಿ ಕಣ್ಣೀರು ಹರಿಸಲು ಪಣ ತೊಡುವುದು. ಇಲ್ಲಿ ನಿರ್ದೇಶಕರು ಇನ್ನೊಂದು ದಾರಿ ಆಯ್ದುಕೊಂಡಿದ್ದಾರೆ. ಆ ಇನ್ನೊಂದು ದಾರಿ ಯಾವುದು?

ಪುಟಾಣಿಯ ತಲೆಯ ಮೇಲೆ ಒಂದು ಮೋಡವನ್ನು ಸೃಷ್ಟಿಸಿದ್ದಾರೆ. ಅದು ಅವನು ಎಲ್ಲಿ ಹೋದರೂ ಅಲ್ಲಿಗೆ ಅವನ ತಲೆಯ ಮೇಲೆ ತೂಗುತ್ತಲೇ ಇರುವ ಮೋಡ. ಮನೆಯಿಂದ ಹೊರಡುವಾಗ ಕಡುಗಪ್ಪಗೆ ಇರುತ್ತದೆ. ಹುಡುಗಿ ಸೇಬನ್ನು ಕೊಟ್ಟಾಗ ಬೆಳ್ಳಗಾಗುತ್ತದೆ. ಮತ್ತೆ ಮನೆಗೆ ಬಂದಾಗ ಅಮ್ಮನ ರೂಮಿನ ಬಾಗಿಲ ಸಮೀಪಿಸುತ್ತಿರುವ ಹಾಗೆ ಮತ್ತೆ ಕಪ್ಪಗಾಗುತ್ತದೆ. ಆ ಬಾಗಿಲ ಸಂದಿಯಿಂದ ಕಡುಗಪ್ಪು ಮೋಡಗಳು ಹೊಗೆಯಂತೆ ಹೊರಗೆ ಬರುತ್ತಿವೆ. ಅದನ್ನು ದಾಟಿಕೊಂಡೇ ಹುಡುಗ ಅಮ್ಮನ ಬಳಿಗೆ ಹೋಗಿ ಕೂಡುತ್ತಾನೆ. ಮೋಡ ಇಲ್ಲಿ ನಮಗೆ ಆ ಹುಡುಗನ ಮನಸ್ಸಿನ ಸಂಕಟಲೋಕವನ್ನು ಸಂಕೇತಿಸುವುದರ ಮೂಲಕ ಕಥನವನ್ನು ಬೆಳೆಸುತ್ತಲೇ ಹೋಗುತ್ತದೆ.

ಅಂದಹಾಗೆ ಈ ಕಿರುಚಿತ್ರದಲ್ಲಿ ಮಾತುಗಳಿಲ್ಲ; ಆದರೆ ಯಾವ ಮಾತಿನಿಂದಲೂ ಕಟ್ಟಕೊಡಲಾಗದ ದುಗುಡಭಾವ, ಮೋಡದ ಹಾಗೆ ನಮ್ಮ ಮನಸನ್ನೂ ಆವರಿಸಿಕೊಳ್ಳುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2Zvl3R3 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.